

# ಹಕ್ಕಿಗಳ ನೋಡಜ್ಜಿ!

ಹಕ್ಕಿಗಳು ಹಾರುತಿವೆ ನೋಡಾ, ಅಜ್ಜಿ
ಹಕ್ಕಿಗಳು ಹಾರುತಿವೆ ನೋಡಾ!

ನೆಲದಿಂದ ಮೇಲೆದ್ದು
ಕಳ್ಳ ಹಾರಿಕೆಯ ಹಾರಿ
ಗಾಳಿಯಲೇ ಇಳಿಜಾರಿ
ತೋರಿಕೆಗಷ್ಟೇ ಹೆದರಿ
ಮತ್ತೆ ಹಕ್ಕಿಗಳು ಹಾರುತಿವೆ ನೋಡಾ ಅಜ್ಜಿ

ನನಗಾಗಿ ಕಾದಿದ್ದೋ
ಎಂಬಂತೆ ನಟಿಸಿದ್ದೋ
ಕುಪ್ಪಳಿಸಿ ನಡೆದದ್ದೋ
ನಡೆಯುತ್ತ ಓಡಿದ್ದೋ
ಸೊಂಪು ಕಾಳನು ಮೆದ್ದು
ಆಗೋ ಹಕ್ಕಿಗಳು ಹಾರುತಿವೆ ನೋಡಾ ಅಜ್ಜಿ

ಹೆಜ್ಜೆ ಎರಡಿಡುವುದರಲಿ
ಕೈಗೆ ಸಿಗುವಷ್ಟರಲಿ
ಕಣ್ಣ ಎವೆ ಮಿಟುಕುವಲಿ
ನನ್ನ ಪರದಾಡಿಸುತಲಿ
ಗುಟುರುಗುಡುತ್ತಲೇ
ಥಟ್ಟನೆ ಹಕ್ಕಿಗಳು ಹಾರುತಿವೆ ನೋಡಾ ಅಜ್ಜಿ

ಪುರೆಂದು ಹಾರುವುದ
ಕಿಂಚಿತ್ತು ಕೂಗುವುದ
ಗಾಳಿಯಲಿ ತೇಲುವುದ
ಎನಗಿಷ್ಟು ಕಲಿಸುವುದಾ ಹೇಳಜ್ಜಿ
ಕಾಲಿದ್ದರೂ ಹಕ್ಕಿಗಳು ಹಾರುವುದು
ಯಾಕಜ್ಜಿ?
ಮತ್ತೆ ಹಾರಿದವು ನೋಡಾ ಅಜ್ಜಿ
ಹಕ್ಕಿಗಳು ಹಾರಿದವು ನೋಡಾ!

● **ಮಾಲ್ಗುಡಿ ಶಿವ**

# ನಾನೂ ಹಾರ್ತೀನಿ!

ಪುರ್‌ಪುರ್ ಅಂತ
ನೀವೇನ್ ಹಾರೋದ್
ನಾನೂನೂ ಹಾರ್ತೀನಿ
ನಿಮ್ಗಿಂತ್ ಎತ್ರ
ನಿಮ್ಗಿಂತ್ ದೂರ
ಗಗನಕ್ಕೇರಿ ನಿಲ್ತೀನಿ!

ನೀವೇನ್ ಹೆದರೋದ್ಬೇಡ
ನಿಮ್ ಪುಕ್ಕ ಕೀಳೋಲ್ಲ
ನಿಮ್ ಪಕ್ಕ ಕೂತ್ಕೊಂಡ್
ಅಕ್ಕಿ ಕಾಳು ತಿನ್ನೋಲ್ಲ
ಗುಟ್ಕ್ ಗುಟ್ಕ್ ನೀರು
ಖಂಡಿತಾ ಕುಡಿಯೋಲ್ಲ!

ನಾನೇ ಕಾಳ್ ಕೊಡ್ತೀನಿ
ಆಟಕ್ ಬನ್ನಿ ಪ್ಲೀಸ್
ದೂರ ಹಾರೋದ್ ಬಿಟ್ಟು
ಇಲ್ಲೇ ಓಡೋಣ್ ಜೂsssಟು
ನಂಗೂ ಸ್ವಲ್ಪ ಹೇಳ್ಕೊಡಿ
ನಿಮ್ ಗುಟರ್ ಗುಟರ್ ಸೀಕ್ರೆಟ್ಟು!

ನೀವೆಲ್ಲಾ ಒಗ್ಗಟ್‌ನಿಂದ
ಬಲೆ ಹಾರ್ಸಿದ್ ಕಥೆ ಹೇಳಿ
ರಾಜನ್ ಪತ್ರ ರಾಣೀಗೆ
ಹಾರಿ ಕೊಟ್ಟಿದ್ ಹೇಗ್ಹೇಳಿ
ನಾನು ಬರ್ತೀನ್, ತಾಳಿ

● **ಬೇದ್ರೆ ಮಂಜುನಾಥ**